ಪ್ರಶ್ನೆ ಸಂಖ್ಯೆ ೯೮೨ (೨೯೫೫)

ಉಪಾಧ್ಯಕ್ಷರು.—ವೆಂಕಟರಾವಂಯ್ಯನವರೇ ತಮ್ಮ ಪ್ರಶ್ನೆಯನ್ನು ಪಿ. ಡಬ್ಲ್ಯು.ಡಿ. ಇಲಾಖೆಗೆ ವರ್ಗಾಯಿಸಲಾಗಿದೆ.

ಕರ್ನಾಟಕ ರಾಜ್ಯ ಲೋಕಲ್ ಬಾಡೀಸ್ ಅಡ್ಮಿನಿಸ್ಟ್ರೇಷನ್ ಸರ್ವೀಸ್ ರಚಿಸುವ ಬಗ್ಗೆ

೨೯೮೭. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ವಸತಿ ಮಂತ್ರಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಐಎಎಸ್, ಐಪಿಎಸ್ ಕೆಎಎಸ್. ಮತ್ತು ಕೆಪಿಎಸ್‌ಸಿ. ಸೇವಾ ವರ್ಗಗಳಿರುವ ಹಾಗೆ ಸ್ಥಳೀಯ ಸಂಸ್ಥೆಗಳ ಆಡಳಿತ ದಕ್ಷತೆ ಹೆಚ್ಚಿಸಲು ಕರ್ನಾಟಕ ಸ್ಟೇಟ್ ಲೋಕಲ್ ಬಾಡೀಸ್ ಅಡ್ಮಿನಿಸ್ಟ್ರೇಷನ್ ಸರ್ವೀಸ್ (ಕೆಎಸ್‌ಎಲ್‌ಬಿಎಎಸ್) ಎಂಬ ವರ್ಗವನ್ನು ರಚಿಸುವ ಆಲೋಚನೆಯಿದೆಯೇ ;

ಆ) ಹೀಗೆ ಮಾಡಲು ಹೆಚ್ಚು ವೆಚ್ಚವೇನಾದರೂ ಆಗುವುದೇ ಆಗುವುದಾದಲ್ಲಿ ಎಷ್ಟು ಅಧಿಕ ಹಣ ಬೇಕಾಗಬಹುದು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲವಾದ್ದರಿಂದ ಈ ಅಂಶವನ್ನು ಪರಿಶೀಲಿಸಿಲ್ಲ.

೧೨-೦೦ ಮಧ್ಯಾಹ್ನ

ಶ್ರೀ ಪಿ. ಎಂ. ಚಿಕ್ಕಬೋರಯ್ಯ —ಮಾನ್ಯ ಅಧ್ಯಕ್ಷರೇ, ಸ್ಥಳೀಯ ಸಂಸ್ಥೆಗಳಲ್ಲಿರತಕ್ಕಂಥ ಸಮಸ್ಯೆಗಳು ಹೆಚ್ಚಾಗಿವೆ. ಅಧಿಕಾರ ವಿಕೇಂದ್ರೀಕರಣ ಆದ ಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಲ್ಲಿ ಅವರು ಎದುರಿಸತಕ್ಕಂಥ ಸಮಸ್ಯೆಗಳು ವಿಭಿನ್ನವಾಗಿವೆ ಈ ಕಾರಣದಿಂದ ಅವರಿಗೆ ಸರಿಯಾದ ರೀತಿಯಲ್ಲಿ ತರಬೇತಿಕೊಟ್ಟು ಒಂದು ಪರೀಕ್ಷೆಯನ್ನು ನಿಗದಿ ಮಾಡಿ ಆ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಮಾತ್ರ ಅಲ್ಲಿ ಕೆಲಸ ಕೊಟ್ಟು ನಡೆಸಿದರೆ ಸೂಕ್ತವಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಿದರೆ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯಾಗುತ್ತದೆಂದು ತಮಗೆ ಅನಿಸುವುದಿಲ್ಲವೇ ?

ಶ್ರೀ ಆರ್. ವಿ. ದೇಶಪಾಂಡೆ —ಮಾನ್ಯ ಅಧ್ಯಕ್ಷರೇ, ಈಗಾಗಲೇ ಕರ್ನಾಟಕ ಮುನಿಸಿಪಾಲಿಟಿ ಆಕ್ಟ್ ೧೯೬೪ರ ಪ್ರಕಾರ ಸಪರೇಟ್ ಕೇಡರ್ ರೂಲ್ಸ್ ಇದೆ. ಆದ್ದರಿಂದ ಇದು ಅವಶ್ಯಕತೆ ಇಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಮುನಿಸಿಪಲ್ ಅಡ್ಮಿನಿಸ್ಟ್ರೇಶನ್ ಬಗ್ಗೆ ಕೇಡರ್ ರೂಲ್ಸ್ ಮಾಡಿದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ ಆದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳು ಆದ ನಂತರ ಅಲ್ಲಿರತಕ್ಕಂಥ ಸಮಸ್ಯೆಗಳು ಈ ಮುನಿಸಿಪಾಲಿಟಿಗಳ ಅಡ್ಮಿನಿಸ್ಟ್ರೇಶನ್‌ಗಿಂತ ವಿಭಿನ್ನವಾಗಿವೆ, ಅದಕ್ಕೆ ಬದಲಾವಣೆ ಮಾಡುವುದಕ್ಕೆ ಸರ್ಕಾರಕ್ಕೆ ಆತಂಕವೇನಿದೆ ಎಂಬುದನ್ನು ದಯಮಾಡಿ ತಿಳಿಸಬೇಕು ?

ಶ್ರೀ ಆರ್. ವಿ. ದೇಶಪಾಂಡೆ —ಮಾನ್ಯ ಅಧ್ಯಕ್ಷರೇ, ನಗರಸಭೆಗಳಲ್ಲಿ ಮತ್ತು ಮುನಿಸಿಪಾಲಿಟಿಗಳಲ್ಲಿ ಕಮಿಷನರ್ ಮತ್ತು ಚೀಫ್ ಆಫೀಸರ್ಸ್ ಇರುತ್ತಾರೆ. ಈ ಬಗ್ಗೆ ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ ಸರ್ಕಾರದ ಮುಂದೆ ಮಾನ್ಯ ಸದಸ್ಯರು ಹೇಳಿದ ಯಾವ ಪ್ರಶ್ನೆಯೂ ಇಲ್ಲ. ನನ್ನ ದೃಷ್ಟಿಯಲ್ಲಿ ಇದು ಸರಿ ಎಂದು ಕಾಣಿಸುವುದಿಲ್ಲ ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರದ ಮುಂದೆ ಇಂತಹ ಯಾವ ಪ್ರಶ್ನೆಯೂ ಇಲ್ಲ ಅದು ಸಾಧ್ಯವೂ ಇಲ್ಲ.